# ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಮಾಜ ಕಲ್ಯಾಣ ಇಲಾಖೆ – ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ**
**ತಳಸಮುದಾಯಗಳ ಅಧ್ಯಯನ ಕೇಂದ್ರ ರಾಷ್ಟ್ರೀಯ ಕಾನೂನು ಶಾಲೆ, ಭಾರತದ ವಿಶ್ವವಿದ್ಯಾಲಯ, ಬೆಂಗಳೂರು.**
**ಡಾ.ಬಾಬು ಜಗನಜೀವನರಾಂ ಸಂಶೋಧನಾ ಸಂಸ್ಥೆ, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ**
**ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ– ಇವರ ಸಹಯೋಗದಲ್ಲಿ**

## ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ – ರಾಜ್ಯಮಟ್ಟದ ಕಾರ್ಯಾಗಾರ – 6.9.2023

### ದೇವದಾಸಿಯರು ಶೋಷಣೆ ಸರಪಳಿಯಿಂದ ಹೊರಬರಬೇಕಿದೆ : ಡಾ. ಭಾಗ್ಯಲಕ್ಷ್ಮಿ ವಿ

ಪ್ರಸ್ತುತ ದಿನಗಳಲ್ಲಿ ನಾವು ಎಷ್ಟೇ ಅಭಿವೃದ್ಧಿ ಹೊಂದಿದರು ವಾಸ್ತವ ಬದುಕಿನಲ್ಲಿ ನಮ್ಮನ್ನು ಕಾಡುತ್ತಿರುವ ಅನಿಷ್ಟ ದೇವದಾಸಿ ಪದ್ಧತಿ ಸ್ವಾತಂತ್ರ್ಯ ಬಂದು ಅಮೃತ ಮಹೋತ್ಸವ ಸಂದರ್ಭದಲ್ಲಿಯೂ ಜೀವಂತವಾಗಿರುವುದು ನಾಚಿಕೇಡಿನ ವಿಷಯ ಎಂದು ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ನಿರ್ದೇಕರಾದ **ಡಾ. ಭಾಗ್ಯಲಕ್ಷ್ಮಿ ವಿ. ಅವರು** ಕಳವಳ ವ್ಯಕ್ತಪಡಿಸಿದರು.




ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ನಿರ್ದೇಶಕರಾದ ಡಾ.ಭಾಗ್ಯಲಕ್ಷ್ಮಿ ವಿ. ಅವರು ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ **ಸಮಾಜ ಕಲ್ಯಾಣ ಇಲಾಖೆ ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ, ತಳಸಮುದಾಯಗಳ ಅಧ್ಯಯನ ಕೇಂದ್ರ ರಾಷ್ಟ್ರೀಯ ಕಾನೂನು ಶಾಲೆ, ಭಾರತದ ವಿಶ್ವವಿದ್ಯಾಲಯ, ಬೆಂಗಳೂರು.** ಡಾ.ಬಾಬು **ಜಗನಜೀವನರಾಂ ಸಂಶೋಧನಾ ಸಂಸ್ಥೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ. ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ** ಸಹಯೋಗದಲ್ಲಿ ಹಮ್ಮಿಕೊಂಡಿದ್ದ **ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ– ರಾಜ್ಯಮಟ್ಟದ ಕಾರ್ಯಾಗಾರವನ್ನು** ಉದ್ಘಾಟಿಸಿ ಮಾತನಾಡುತ್ತ, ಜಾಗತಿಕ ಮಟ್ಟದಲ್ಲಿ ಆಧುನಿಕ ಅಭಿವೃದ್ಧಿಯ ಸುಸ್ಥಿರ ಸೂಚ್ಯಾಂಕದಲ್ಲಿ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯನ್ನು ಕಾಣಬೇಕಿದೆ. ನೀತಿ, ನಿರೂಪಣೆ, ಕಾಯ್ದೆ, ಮಸೂದೆಗಳನ್ನ ರೂಪಿಸುವುದರಿಂದ ದೇವದಾಸಿಯರ ಬದುಕು ಸುಧಾರಣೆಗೊಳ್ಳದು. 12ನೇ ಶತಮಾನದ ಬಸವಣ್ಣ ಶರಣರಾದಿಯಾಗಿ ಮಾತೆಂಬುವುದು ಜ್ಯೋರ್ತಿಲಿಂಗ ಎನ್ನುವಂತೆ ಇಂದು ಮಾತು ಮೌಲ್ಯವಾಗಿ ಬದಲಾಗುವ ನಿಟ್ಟಿನಲ್ಲಿ ಜನಸಾಮಾನ್ಯರು, ಅಧಿಕಾರಿಗಳು, ವಿಶ್ವವಿದ್ಯಾಲಯಗಳು ಬದಲಾಗಬೇಕಿದೆ. ಪ್ರಜಾಪ್ರಭುತ್ವದಲ್ಲಿ ಪ್ರಜ್ಞಾವಂತ

ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಪ್ರಜ್ಞಾಪೂರಕವಾಗಿ ಕಾರ್ಯನಿರ್ವಹಿಸಬೇಕು. ಹಣವಂತರ, ಉದ್ದಿಮೆದಾರರ ಮಕ್ಕಳು ಉನ್ನತ ಅಧಿಕಾರಿಗಳಾಗಿರುವ ಉದಾಹರಣೆಗಳಿಲ್ಲ. ಆದ್ದರಿಂದ ತಳಸಮುದಾಯದಿಂದ ವಿದ್ಯಾವಂತರು ಅಧಿಕಾರಿಗಳಾಗಿ ಸಮುದಾಯದ ಬದಲಾವಣೆ ಮಾಡುವ ಕಾರ್ಯವಾಗಬೇಕಿದೆ. ಶಿಕ್ಷಣ ಎನ್ನುವುದು ಕೇವಲ ಅನ್ನ ಉದ್ಯೋಗವನ್ನ ಕೊಡುವಂತದ್ದಲ್ಲ. ಶಿಕ್ಷಣದಿಂದ ಸಮಾಜದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ರೂಪುಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ತಳಸಮುದಾಯಗಳ ಅಧ್ಯಯನ ಕೇಂದ್ರ ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ, ಕಾರ್ಯಾಗಾರದ ಸಂಯೋಜಕರು, **ಡಾ. ಆರ್.ವಿ ಚಂದ್ರಶೇಖರ ಅವರು** ಪ್ರಾಸ್ತಾವಿಕವಾಗಿ ಮಾತನಾಡುತ್ತ ಸಂಶೋಧನೆ ಎನ್ನುವಂತದ್ದು ಸಾಮಾಜಿಕ ಬದಲಾವಣೆ ಆಗುವ ನಿಟ್ಟಿನಲ್ಲಿ ನಡೆಯಬೇಕಿದೆ. ದೇವದಾಸಿ ಪದ್ಧತಿ ನಿರ್ಮೂಲನೆ ಆಗದೇ ಪುನರ್ವಸತಿ ಕಲ್ಪಿಸದೆ ಇರುವುದು ಬೇಸರ ಸಂಗತಿ. ಕೆಲವು ಎನ್.ಜಿ.ಓ.ಗಳು ಪುನರ್ವಸತಿ ಮಾಡಿವೆ ಎಂದು ಪ್ರಚಾರಗಿಟ್ಟಿಸಿಕೊಳ್ಳುತ್ತಿವೆ ಇದು ವಾಸ್ತವಾಂಶದಲ್ಲಿ ಸುಳ್ಳಾಗಿದೆ. ಇಂದು ಕೇವಲ ದೇವದಾಸಿ ಮಹಿಳೆಯರ ಪುನರ್ವಸತಿ ಅಲ್ಲದೆ ಅವರ ಕುಟುಂಬದ ಪುನರ್ವಸತಿ ಕಾರ್ಯ ನಡೆಯಬೇಕಿದೆ. ಅಂತರ್ಜಾತಿ ವಿವಾಹ ಯೋಜನೆಯ ಹಾಗೆ ದೇವದಾಸಿ ಮಕ್ಕಳ ವಿವಾಹ ಯೋಜನೆ ರೂಪಿಸಬೇಕಿದೆ. ಅಂಕಿ–ಅಂಶಗಳ ಆಧಾರದ ಮೇಲೆ ಸಂಪೂರ್ಣವಾಗಿ ದೇವದಾಸಿಯರ ಸೌಲಭ್ಯ ಹಾಗೂ ಪುನರ್ವಸತಿಯಾಗಬೇಕು. ನಾಗಮೋಹನದಾಸ್ ವರದಿ ಆಧಾರದ ಮೇಲೆ ದೇವದಾಸಿ ಅಭಿವೃದ್ಧಿ ನಿಗಮವಾಗಬೇಕಿದೆ. ದೇವದಾಸಿ ನಿರ್ಮೂಲನೆಗೆ ನಾಗರೀಕ ಸಮಾಜದ ಪ್ರಮುಖ ಜವಾಬ್ದಾರಿ ಎಂದರು.

ಈ ಕಾರ್ಯಕ್ರಮದಲ್ಲಿ ಅಮ್ಮ ಫೌಂಡೇಶನಿನ **ಶೋಭಾ ಗಸ್ತಿಯವರು** ಅಧ್ಯಕ್ಷತೆ ವಹಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ **ಬಿ. ಮಾಳಮ್ಮ,** ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರು ಹಾಗೂ ಕಾರ್ಯಾಗಾರದ ಸಂಚಾಲಕರಾದ **ಡಾ. ಎಚ್.ಡಿ. ಪ್ರಶಾಂತ್**, ಪ್ರಾಧ್ಯಾಪಕರಾದ **ಡಾ. ಜನಾರ್ಧನ್,** ಡಾ. ಬಾಬು ಜಗನಜೀವರಾಂ ಸಂಶೋಧನಾ ಸಂಸ್ಥೆ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ನಿರ್ದೇಶಕರಾದ **ಡಾ. ತಿಪ್ಪೇಸ್ವಾಮಿ ಎಚ್.,** ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಸಂಚಾಲಕರಾದ **ಮಂಜುಳಾ ಮಾಳ್ಗಿ, ವಿವಿಧ ಭಾಗಗಳಿಂದ ಆಗಮಿಸಿದ ದೇವದಾಸಿ ತಾಯಂದಿರು ಮತ್ತು ಮಕ್ಕಳು,** ವಿವಿಧ ನಿಕಾಯಗಳ ಡೀನರು, ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ **ಡಾ. ಗೀತಮ್ಮ ಕೆ.** ಅವರು ಗಣ್ಯರನ್ನು ಸ್ವಾಗತಿಸಿದರು. ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಸಂಚಾಲಕರಾದ **ಯಮನೂರಪ್ಪ ಹೆಚ್ ರವರು** ಕಾರ್ಯಕ್ರಮ ನಿರೂಪಿಸಿದರು.



ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ ರಾಜ್ಯಮಟ್ಟದ ಕಾರ್ಯಾಗಾರ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಮಾಹಿತಿಕೇಂದ್ರ

ಪ್ರಜಾವಾಣಿ ಶುಕ್ರವಾರ • ಸೆಪ್ಟೆಂಬರ್ 8, 2023

ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಕಾರ್ಯಾಗಾರ

# ‘ಶೋಷಣೆ ಸರಪಳಿಯಿಂದ ಹೊರಬನ್ನಿ’

ಪ್ರಜಾವಾಣಿ ವಾರ್ತೆ



ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ ಕಾರ್ಯಾಗಾರವನ್ನು ಉದ್ಘಾಟಿಸಿದ ಗಣ್ಯರು

ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » GANGAVATI
ಗುರುವಾರ 7 ಸೆಪ್ಟೆಂಬರ್ 2023
7 SEPTEMBER 2023

ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ.ಭಾಗ್ಯಲಕ್ಷ್ಮೀ ಆಶಯ

# ಅನಿಷ್ಟ ಆಚರಣೆಗಳು ತೊಲಗಲಿ



ಕನ್ನಡ ವಿವಿಯಲ್ಲಿ ರಾಜ್ಯಮಟ್ಟದ ಕಾರ್ಯಾಗಾರ

ಶನಿವಾರ 9 ಸೆಪ್ಟೆಂಬರ್ 2023, ಗಂಗಾವತಿ
ವಿಜಯ ಕರ್ನಾಟಕ VK

# ‘ಅನಿಷ್ಟ ಪದ್ಧತಿ ಜೀವಂತವಿರುವುದು ನಾಚಿಕೆಗೇಡು’

ವಿಕ ಸುದ್ದಿಲೋಕ ವಿಜಯನಗರ (ಹೊಸಪೇಟೆ)



ಕನ್ನಡ ವಿವಿಯ ಮಂಟಪ ಸಭಾಂಗಣದಲ್ಲಿ ಗುರುವಾರ ನಡೆದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ.ವಿ.ಭಾಗ್ಯಲಕ್ಷ್ಮಿ ಚಾಲನೆ ನೀಡಿದರು.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ

ತಳಸಮುದಾಯಗಳ ಅಧ್ಯಯನ ಕೇಂದ್ರ
ರಾಷ್ಟ್ರೀಯ ಕಾನೂನು ಶಾಲೆ, ಭಾರತದ ವಿಶ್ವವಿದ್ಯಾಲಯ, ಬೆಂಗಳೂರು

ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ
ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ

ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

ಸಂಯುಕ್ತ ಆಶ್ರಯದಲ್ಲಿ

# ದೇವದಾಸಿ ಪದ್ಧತಿ ನಿಷೇಧ ಕಾಯ್ದೆ ಮತ್ತು ಕಾನೂನುಗಳು ಮತ್ತು ದೇವದಾಸಿ ತಾಯಂದಿರು ಮತ್ತು ಮಕ್ಕಳ ಪುನರ್ವಸತಿ ಮುಕ್ತ ಅವಲೋಕನ

ದಿನಾಂಕ 06-09-2023, ರಿಂದ 07-09-2023 ವರೆಗೆ,
ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಮಂಟಪ ಸಭಾಂಗಣ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ – 583 276, ಹೊಸಪೇಟೆ

ಆಹ್ವಾನ ಪತ್ರಿಕೆ

____________________

________________

## ಸ್ವಾಗತ

**ಡಾ. ಗೀತಮ್ಮ ಕೆ.**
ಮುಖ್ಯಸ್ಥರು, ಅಭಿವೃದ್ಧಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

## ಪ್ರಾಸ್ತಾವಿಕ

**ಡಾ. ಆರ್ ವಿ ಚಂದ್ರಶೇಖರ್**
ಕಾರ್ಯಾಗಾರದ ಸಂಯೋಜಕರು, ತಳಸಮುದಾಯಗಳ ಅಧ್ಯಯನ ಕೇಂದ್ರ
ರಾಷ್ಟ್ರೀಯ ಕಾನೂನು ಶಾಲೆ, ಭಾರತ ವಿಶ್ವವಿದ್ಯಾಲಯ.

## ಉದ್ಘಾಟಕರು

**ಡಾ. ಭಾಗ್ಯಲಕ್ಷ್ಮಿ. ವಿ**
ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು

## ಅಧ್ಯಕ್ಷತೆ

**ಶ್ರೀಮತಿ ಶೋಭಾ ಗಸ್ತಿ**
ಅಮ್ಮ ಫೌಂಡೇಶನ್, ಘಟಪ್ರಭಾ

## ಮುಖ್ಯ ಅತಿಥಿಗಳು

**ಶ್ರೀಮತಿ ಬಿ.ಮಾಳಮ್ಮ**
ರಾಜ್ಯ ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ

**ಡಾ. ಭಾಗ್ಯಲಕ್ಷ್ಮಿ ಎಂ.**
ನಿರ್ದೇಶಕರು ಸಖಿ ಸಂಸ್ಥೆ, ಹೊಸಪೇಟೆ

**ಡಾ. ಎಚ್.ಡಿ ಪ್ರಶಾಂತ್**
ಕಾರ್ಯಾಗಾರದ ಸಂಚಾಲಕರು
ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

**ಡಾ. ಜನಾರ್ಧನ್**
ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ

**ಶ್ರೀ ಯಮನೂರಪ್ಪ**
ಸಂಚಾಲಕರು, ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಕರ್ನಾಟಕ.

**ಶ್ರೀಮತಿ ಮಂಜುಳಾ ಮಾಳ್ಗಿ**
ಮರಿಯಮ್ಮನ ಹಳ್ಳಿ, ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಕರ್ನಾಟಕ.